# ರಸ್ತೆ ವಿಭಜಕವೇ ಈ ರಾಜ್ಯದ ಗಡಿ



ಚಿತ್ರದಲ್ಲಿ ಕಾಣುತ್ತಿರುವುದು ಕೇವಲ ರಸ್ತೆ ವಿಭಜಕವಲ್ಲ. ಇದು ಎರಡು ರಾಜ್ಯಗಳ ಗಡಿಯನ್ನೂ ಸೂಚಿಸುವ ವಿಭಜಕವಾಗಿದೆ. ಈಚೆಗೆ ಮೇಘಾಲಯ ಅರುಣಾಚಲಪ್ರದೇಶ ಕೆಲವೆಡೆಗೆ ಪ್ರವಾಸಕ್ಕೆಂದು ಹೋಗಿದ್ದಾಗ ಇದರ ಬಗ್ಗೆ ಮಾಹಿತಿ ಗೊತ್ತಾಯಿತು. ಅಸ್ಸಾಂ ರಾಜ್ಯದ ಗುವಾಹತಿಯಿಂದ ಮೇಘಾಲಯ ರಾಜ್ಯದ ರಾಜಧಾನಿ ಶಿಲ್ಲಾಂಗಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 40ರಲ್ಲಿ ಹಾದು ಹೋಗುವಾಗ ಸಿಕ್ಕ ಈ ರಸ್ತೆ ವಿಭಜಕವು, ಅಸ್ಸಾಂ ಹಾಗೂ ಮೇಘಾಲಯ ರಾಜ್ಯಗಳ ಗಡಿರೇಖೆಯೆಂದು ಅಲ್ಲಿದ್ದವರಿಂದ ತಿಳಿಯಿತು. ರಸ್ತೆಯ ಒಂದು ಬದಿ ಅಸ್ಸಾಂ ರಾಜ್ಯಕ್ಕೆ ಸೇರಿದರೆ ಇನ್ನೊಂದು ಬದಿ ಮೇಘಾಲಯ ರಾಜ್ಯಕ್ಕೆ ಸೇರಿದೆ.

ಮೇಘಾಲಯ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಮದ್ಯದ ಮೇಲಿನ ಸುಂಕ ಕಡಿಮೆಯಿದೆ. ಈ ಕಾರಣಕ್ಕೆ ಅಸ್ಸಾಂನ ಜನ ಕೇವಲ ಒಂದು ಯೂಟರ್ನ್ ಮಾಡಿ ಮೇಘಾಲಯ ರಾಜ್ಯಕ್ಕೆ ಹೋಗಿ ಗಾಡಿ(vehicle), ಬಾಡಿ(body)ಗಳಿಗೆ ಕಡಿಮೆ ದರದಲ್ಲಿ 'ಎಣ್ಣೆ' ತುಂಬಿಸಿಕೊಂಡು ಬರುವ ಅಪರೂಪದ ಅವಕಾಶ ಪಡೆಯುತ್ತಿದ್ದಾರೆ.

—ಎಚ್.ಎಸ್. ನಂದಕುಮಾರ್, ಮಂಗಳೂರು

# ಸುಗ್ಗಿ ಸಡಗರ ಕಸಿದ ಯಂತ್ರ










ಹಿಂದೆಲ್ಲಾ, 15–20 ಮನೆಯವರು ಒಟ್ಟಿಗೆ ಸೇರಿ ಒಬ್ಬರದ್ದಾದ ನಂತರ ಮತ್ತೊಬ್ಬರ ಭತ್ತದ ಕೊಯ್ಲು ಮಾಡುವುದು ಡಿಸೆಂಬರ್, ಜನವರಿಯಲ್ಲಿ ಹೆಚ್ಚಾಗಿ ಕಾಣುತ್ತಿತ್ತು. ಅದಕ್ಕಾಗಿ 30–40 ಜನರಿಂದ ಗದ್ದೆಗಳು ತುಂಬಿರುತ್ತಿದ್ದವು. ಅಷ್ಟೊಂದು ಜನರಿಗೆ ತಿಂಡಿ, ಕಾಫಿ, ಚಹಾ, ಊಟ, ಎಲೆ ಅಡಿಕೆಯ ಉಪಚಾರ ಮಾಡುವಲ್ಲಿ ಆಯಾ ದಿನದ ಗದ್ದೆಯ ಮಾಲೀಕರು ತುಂಬಾ ಉತ್ಸಾಹದಿಂದ ತೊಡಗಿಸಿಕೊಳ್ಳುತ್ತಿದ್ದರು. ಸತತವಾಗಿ ಒಂದೆರಡು ತಿಂಗಳು ಭತ್ತವನ್ನು ಕೊಯ್ದು, ರಾಶಿ ಮಾಡಿ ಹುಲ್ಲು ಬಣವೆಯಾಗುವವರೆಗೆ ಪ್ರತಿದಿನ ಎಲ್ಲರೂ ಒಟ್ಟಿಗಿರುತ್ತಿದ್ದರು.

ಬೆಳಿಗ್ಗೆಯಿಂದ ಸಂಜೆವರೆಗೆ ಈ ಕೆಲಸಗಳಾದರೆ ಸಂಜೆ ಅಡಿಕೆ ಸುಲಿಯುವ ಕೆಲಸ, ಚಳಿಗಾಲವಾದುದ್ದರಿಂದ ಮಧ್ಯ ಮಧ್ಯದಲ್ಲಿ ಅಗ್ಗಿಷ್ಟಿಕೆಯಲ್ಲಿ ಚಳಿ ಕಾಯಿಸಿಕೊಳ್ಳುತ್ತಾ ಮನೆಯ ಮಾಲೀಕರು ಕೊಡುವ ಬಿಸಿಬಿಸಿ ಕಾಫಿಯೊಂದಿಗೆ ಊರಿನ ವಿಷಯವನ್ನೆಲ್ಲಾ ಉಪ್ಪು ಖಾರ ಸೇರಿಸಿ ಹರಟೆ ಹೊಡೆಯುತ್ತ, ಅಡಿಕೆ ಸುಲಿಯುವುದರ ಜೊತೆಗೆ ಮನರಂಜನೆಯೂ ಆಗಿರುತ್ತಿತ್ತು. ಆದರೆ ಇಂದಿನ ಪರಿಸ್ಥಿತಿ ತೀರ ಭಿನ್ನವಾಗಿದೆ. ಆದರೆ, ಜನರಿಂದ ತುಂಬಿ ತುಳುಕಾಡುತ್ತಿದ್ದ ಗದ್ದೆಗಳಲ್ಲೀಗ ಯಂತ್ರಗಳು ತುಂಬಿವೆ. ಎಲ್ಲಿ ನೋಡಿದರೂ ಯಂತ್ರಗಳದ್ದೇ ಕಾರುಬಾರು, ಬೇರೆ ಬೇರೆ ಕಡೆಯಿಂದ ಬರುವ ಯಂತ್ರಗಳು ಒಂದು ವಾರದ ಕೆಲಸ ಒಂದು ಗಂಟೆಯಲ್ಲಿ ಮಾಡಿ ಮುಗಿಸುತ್ತವೆ. ಪ್ರತಿ ಮನೆಯಲ್ಲೂ ಅಡಿಕೆ ಸುಲಿಯುವ ಯಂತ್ರ, ಹೆಚ್ಚೇನೂ ಕೆಲಸವಿಲ್ಲದ ಕಾರಣ ಮನೆಯವರೇ ಮಾಡಿಕೊಳ್ಳುತ್ತಾರೆ, ಯಾವ ಊಟ ಕಾಫಿ, ಸಂಬಳದ ಗೊಡವೆಯಿಲ್ಲ.

ಇಂದಿನ ಜೀವನಶೈಲಿ, ಸಮಯ, ಆದಾಯ, ಎಲ್ಲವನ್ನೂ ನೋಡಿದಾಗ ಯಂತ್ರಮಯ ಜೀವನವೇ ಹೆಚ್ಚು ಅನುಕೂಲಕರ ಅನಿಸುತ್ತದೆ. ಆದರೆ ವೈಯಕ್ತಿಕವಾಗಿ ಜನರಿಗೆ ಇದರಿಂದ ನಷ್ಟವೇ ಹೆಚ್ಚು. ಯಂತ್ರಗಳಿಂದಾಗಿ ಜನರ ದೇಹ ಜಡ್ಡುಗಟ್ಟುತ್ತಿದೆ. ರೈತರು, ಕೂಲಿಕಾರ್ಮಿಕರ ದೈಹಿಕ ಸ್ಥಿರತೆ ಹದಗೆಡುತ್ತಿದೆ. ಎಲ್ಲಕ್ಕಿಂತ ಮಿಗಿಲಾಗಿ ರೈತ ಸಂಸ್ಕೃತಿ ಕಣ್ಮರೆಯಾಗುತ್ತಿದೆ. ರೈತರ ಸುಗ್ಗಿ ಸಡಗರವೇ ಕಳೆಗುಂದಿದೆ.

—ಜಯಂತಿ ರಾಘವೇಂದ್ರ, ಆಗುಂಬೆ